**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 02-04-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ಶ್ರೀ. ಹೆಚ್ ಎನ್ ಎಸ್ ವಕೀಲರವರಿಂದಃ -**

ನಾನು 10 ನೇ ತರಗತಿಯವರೆಗೂ ಓದಿರುತ್ತೇನೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಬರುತ್ತದಾ ಎಂದರೆ ಸಾಕ್ಷಿ ಕನ್ನಡ ಬರುತ್ತದೆ ಎನ್ನುತ್ತಾರೆ. ಅರಕೆರೆ ಗ್ರಾಮದ ಶಾಖೆಯ ಕೆನಾರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದು, ಸದರಿ ಖಾತೆಯ ಮೂಲಕ ನಾನು ವ್ಯವಹಾರ ಮಾಡುತ್ತೇನೆಂದರೆ ಸರಿ. ವಕಾಲತ್ ನಲ್ಲಿರುವ ಸಹಿ ನನ್ನದು. ನಿಪಿ-1 ರ ಚೆಕ್ ನನ್ನದು ಎಂದರೆ ಸರಿ. ನಮ್ಮ ಊರು ಮತ್ತು ಬೇವಿನಹಳ್ಳಿಯ ನಡುವೆ 2-3 ಕಿಮೀ ಅಂತರವಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮಂಡ್ಯಕ್ಕೆ ಬೇವಿನಹಳ್ಳಿ ಮಾರ್ಗವಾಗಿ ಬರುತ್ತೇನೆಂದರೆ ಸರಿ.

ದೂರುದಾರರು ಹಲವಾರು ವರ್ಷಗಳಿಂದ ಪರಿಚಯವಿದ್ದರು ಎಂದರೆ ಸರಿಯಲ್ಲ. ಪರಿಚಯವಿದ್ದರೂ ಪರಿಚಯವಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಶೀಲಾ ರವರಿಗೆ ಚೆಕ್ ನೀಡಿದ್ದಾಗಿ ಹೇಳಿದ್ದು ಸದರಿಯವರ ವಿಳಾಸವೇನು ಎಂದರೆ ಸಾಕ್ಷಿ ಸುಂಡಹಳ್ಳಿ ಗ್ರಾಮ ಎಂದು ಮತ್ತು ಅವರ ತಂದೆಯ ಹೆಸರು ಅಥವಾ ಗಂಡನ ಹೆಸರು ನನಗೆ ಗೊತ್ತಿಲ್ಲ, ಸುಮಾರು 30-35 ವರ್ಷ ಆಗಿರುತ್ತದೆ ಎನ್ನುತ್ತಾರೆ. ಸದರಿ ಶೀಲಾ ರವರು ಸುಮಾರು 15 ವರ್ಷಗಳಿಂದ ಪರಿಚಯವಿದ್ದಾರೆ. ಸದರಿಯವರ ಗಂಡ ಮತ್ತು ತಂದೆಯ ಹೆಸರು ತಿಳಿದುಕೊಳ್ಳಲು ತೊಂದರೆ ಇರಲಿಲ್ಲ. ಸದರಿ ಶೀಲಾ ಎಂಬ ವ್ಯಕ್ತಿಯನ್ನು ಸೃಷ್ಟಿ ಮಾಡಿದ್ದು ದೂರುದಾರರಿಗೆ ಸದರಿಯವರು ಯಾರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಶೀಲಾ ರವರಿಂದ ಆಗಸ್ಟ್ 2023 ರಲ್ಲಿ ಸಾಲ ಪಡೆದಿದ್ದೆ. ಸದರಿ ಸಾಲವನ್ನು 2023 ರ ನವೆಂಬರ್ ನಲ್ಲಿ ಹಿಂದಿರುಗಿಸಿರುತ್ತೇನೆ. ಹಣ ಹಿಂದಿರುಗಿಸಿದಾಗ ಆನ್ ಡಿಮ್ಯಾಂಡ್ ಪ್ರನೋಟ್ ಮತ್ತು ಚೆಕ್ ವಾಪಸ್ಸು ಪಡೆಯಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಹುಡುಕಿಕೊಡುವುದಾಗಿ ಹೇಳಿದ್ದರು ಎನ್ನುತ್ತಾರೆ. ಹಣವನ್ನು ಹಿಂದಿರುಗಿಸಿದ 8 ದಿನಗಳ ನಂತರ ಹೋಗಿ ಕೇಳಿರುತ್ತೇನೆ. ಅದಾದ ನಂತರವೂ ಹೋಗಿ ಕೇಳಿದ್ದು ಚೆಕ್ ಕೊಟ್ಟಿರುವುದಿಲ್ಲ. ಚೆಕ್ ನ್ನು ಹಿಂದಿರುಗಿಸಿಲ್ಲ ಎಂದು ಪೊಲೀಸ್ ದೂರು ದಾಖಲಿಸಲು ಹೊಗೀದ್ದೆ ಆದರೆ ಪ್ರಕರಣ ಬಾಕಿ ಇರುವುದರಿಂದ ಸ್ವೀಕರಿಸಿಲ್ಲ. ಯಾವ ದಿನಾಂಕಂದು ದೂರು ನೀಡಲು ಹೋಗಿದ್ದೆ ಎಂದು ಗೊತ್ತಿಲ್ಲ. ಸದರಿ ಶೀಲಾ ರವರು ಚೆಕ್ ಹಿಂದಿರುಗಿಸಿಲ್ಲ ಎಂದು ಖಾಸಗಿ ದೂರು ದಾಖಲಿಸಿಲ್ಲ. ದಾಖಲಿಸಲು ತೊಂದರೆ ಇತ್ತೆ ಎಂದರೆ ನನಗೆ ಗೊತ್ತಾಗಲಿಲ್ಲ ಎನ್ನುತ್ತಾರೆ. ನಾನು ದೂರುದಾರರಿಂದ 3 ಲಕ್ಷ ಸಾಲ ಪಡೆದಿದ್ದರೂ ಕೂಡ ಸದರಿ ಹಣವನ್ನು ಹಿಂದಿರುಗಿಸುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸದರಿ ಶೀಲಾ

ರವರನ್ನು ಸೃಷ್ಟಿ ಮಾಡಿದ್ದೆನೆಂದರೆ ಸರಿಯಲ್ಲ. ದಿ 10-01-2021 ರಂದು ದೂರುದಾರರಿಂದ 3 ಲಕ್ಷ ಸಾಲ ಪಡೆದು 2 ತಿಂಗಳಲ್ಲಿ ವಾಪಸ್ಸು ಮಾಡುತ್ತೇನೆಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. 2 ತಿಂಗಳ ನಂತರ ನಾನು ನಿಪಿ-1 ರ ಚೆಕ್ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಚೆಕ್ ನ ಒಕ್ಕಣೆಯನ್ನು ಬರೆಸಿ ಪಿರ್ಯಾದುದಾರರ ಮುಂದೆಯೇ ಸಹಿ ಮಾಡಿ ನೀಡಿದ್ದೆ ಎಂದರೆ ಸರಿಯಲ್ಲ. ನನ್ನ ಮಾತನ್ನು ನಂಬಿ ದೂರುದಾರರು ತಮ್ಮ ಖಾತೆಗೆ ಹಾಜರುಪಡಿಸಿದಾಗ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ದಿ 29-01-2022 ರಂದು ವಾಪಸ್ಸು ಬಂದಿದೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಕೂಡ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಸದರಿ ವಿಚಾರವಾಗಿ ದೂರುದಾರರು ನನ್ನನ್ನು ಭೇಟಿ ಮಾಡಿ ಹಣ ಹಿಂದಿರುಗಿಸುವಂತೆ ಕೇಳಿದ್ದು ನಾನು ಸರಿಯಾಗಿ ಸ್ಪಂದಿಸಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನಗೆ ಅವರು ಯಾರೆಂದು ಗೊತ್ತೆ ಇಲ್ಲ ಎನ್ನುತ್ತಾರೆ. ದಿ 03-02-2022 ರಂದು ನೋಟೀಸ್ ನೀಡಿದ್ದಾರೆಂದರೆ ಸರಿ. ನೋಟೀಸ್ ಜಾರಿಯಾದ ನಂತರ ದೂರುದಾರರು ನನಗೆ ಗೊತ್ತಿಲ್ಲದಿದ್ದರೂ ನನ್ನ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ಸದರಿಯವರ ವಿರುದ್ಧ ದೂರು ದಾಖಲಿಸಿಲ್ಲ. ಸದರಿ ದೂರು ದಾಖಲಿಸಲು ತೊಂದರೆ ಇತ್ತೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ಸದರಿ ನೋಟೀಸ್ ಗೆ ಪ್ರತಿಯ್ಯುತ್ತರ ನೀಡಲು ತೊಂದರೆ ಇತ್ತಾ ಎಂದರೆ ನನಗೆ ತಿಳುವಳಿಕೆ ಇರಲಿಲ್ಲ ಎನ್ನುತ್ತಾರೆ.ನಾನು ದೂರುದಾರರಿಂದ ಸಾಲ ಪಡೆದು ಚೆಕ್ ನೀಡಿದ್ದರೂ ಕೂಡ ಸದರಿ ಸಾಲದ ಹಣವನ್ನು ಕೊಡುವುದನ್ನು ತಪ್ಪಿಸಿಕೊಳ್ಳಲು ನನಗೆ ವಿಚಾರ ಗೊತ್ತಿರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಾನು ದೂರುದಾರರಿಂದ ಸಾಲ ಪಡೆದಿದ್ದರಿಂದಲೇ ಯಾವುದೇ ಪ್ರತಿಯ್ಯುತ್ತರ ನೀಡಿಲ್ಲ ಮತ್ತು ಸದರಿಯವರ ವಿರುದ್ಧ ದೂರು ದಾಖಲಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆ ಸೃಷ್ಟಿತವಾಗಿದ್ದು ಪ್ರಕರಣಕ್ಕೆ ಪೂರಕವಾಗಿಲ್ಲ ಎಂದರೆ ಸರಿಯಲ್ಲ. ಸದರಿಯು ಬೇರೆ ಪ್ರಕರಣದ ದಾಖಲೆಯಾಗಿದೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ ಹಣ ಕೊಡುವ ಬಾಧ್ಯತೆ ಹೊಂದಿದ್ದರೂ ಕೂಡ ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**ಸಾಕ್ಷಿಗೆ ಈಗಾಗಲೇ ಸಾಕಷ್ಟು ಬಾರಿ ದಂಡ ವಿಧಿಸಿದ್ದರೂ ದಂಡ ಪಾವತಿಸದೇ ನಿರ್ಲಕ್ಷತೆ ವಹಿಸಿದ್ದು, ಮುಂದಿನ ದಿನಾಂಕಗಳಲ್ಲಿ ದಂಡ ಪಾವತಿಸದಿದ್ದಲ್ಲಿ ಸಾಕ್ಷಿಯ ಪ್ರತಿರಕ್ಷೆಯನ್ನು ತಿರಸ್ಕರಿಸಲಾಗಿದೆ ಎಂದು ಪರಿಗಣಿಸಿ ಮುಂದೂಡಲಾಗಿದೆ.**

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು